# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1323 |
| ಸದಸ್ಯರ ಹೆಸರು | : | ಶ್ರೀ ಎಸ್. ರುದ್ರೇಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 21-12-2018 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಭಾರತ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ (AMRUT) ಅಮೃತ್ ಯೋಜನೆಗೆ ರಾಜ್ಯ ಸರ್ಕಾರಕ್ಕೆ ನೀಡಿರುವ ಜಿಲ್ಲಾವಾರು ಅನುದಾನ ಎಷ್ಟು; ಇದರ ಕಾರ್ಯ ಪ್ರಗತಿ ಯಾವ ಹಂತದಲ್ಲಿದೆ; ಈ ಯೋಜನೆಯ ಆಶಯದಂತೆ ಪರಿಸರಕ್ಕೆ ಧಕ್ಕೆಯಾಗದಂತೆ ಅನುಷ್ಠಾನ ಗೊಳಿಸಲಾಗುತ್ತಿದೆಯೇ: | ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ರಾಜ್ಯದ 5 ವರ್ಷಗಳ ರೂ.4952.87 ಕೋಟಿ ಮೊತ್ತದ ವಾರ್ಷಿಕ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಅಪೆಕ್ಸ್ ಸಮಿತಿಯ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯಡಿ ರಾಜ್ಯದ 27 ನಗರಗಳು ಆಯ್ಕೆಯಾಗಿದ್ದು, ಅವುಗಳಿಗೆ ಹಂಚಿಕೆ ಮಾಡಲಾದ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br><br>ಯೋಜನೆಯಡಿ ಕೈಗೊಂಡ ರೂ.4952.87 ಕೋಟಿ ಮೊತ್ತದ 405 ಕಾಮಗಾರಿಗಳಲ್ಲಿ ರೂ.22.77 ಕೋಟಿ ಮೊತ್ತದ 46 ಕಾಮಗಾರಿಗಳು ಪೂರ್ಣಗೊಂಡಿವೆ. ರೂ.4583.19 ಕೋಟಿ ಮೊತ್ತದ 252 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ರೂ.579.02 ಕೋಟಿ ಮೊತ್ತದ 105 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ ಮತ್ತು ರೂ. 2.96 ಕೋಟಿ ಮೊತ್ತದ 2 ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. ಯೋಜನೆಯಡಿ ನವೆಂಬರ್ 2018ರ ಅಂತ್ಯಕ್ಕೆ ಒಟ್ಟು ರೂ.1487.02 ಕೋಟಿಗಳು ವೆಚ್ಚವಾಗಿದೆ.<br><br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮೋದನೆ ಪಡೆದು, ಮಲಿನ ನೀರು ಶುದ್ಧೀಕರಣಗಾರ ಘಟಕವನ್ನು ನಿರ್ಮಿಸಲಾಗುತ್ತಿದೆ. CPHEEO Norms ಗಳಂತೆ ಮಲಿನ ನೀರನ್ನು ಶುದ್ಧೀಕರಿಸಿ, ಶುದ್ಧೀಕರಿಸಿದ ನೀರನ್ನು ನೈಸರ್ಗಿಕ ನಾಲೆಗಳಿಗೆ ಬಿಡಲಾಗುವುದು. ಆದ್ದರಿಂದ, ಕೈಗೊಂಡಿರುವ ಕಾಮಗಾರಿಗಳನ್ನು ಪರಿಸರಕ್ಕೆ ಧಕ್ಕೆಯಾಗದಂತೆ ಅನುಷ್ಠಾನಗೊಳಿಸಲಾಗುತ್ತಿದೆ. |

ಆ) ಅಮೃತ್ ಯೋಜನೆ ಮತ್ತು ಸ್ಮಾರ್ಟ್ ಸಿಟಿ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಅನುದಾನ ಎಷ್ಟು;

ಇ) ಬಿಡುಗಡೆಯಾದ ಅನುದಾನದಲ್ಲಿ ಯೋಜನೆಗೆ ಖರ್ಚಾದ ಅನುದಾನ ಎಷ್ಟು? (ವಿವರ ನೀಡುವುದು)

'ಅಮೃತ್' ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇದುವರೆಗೆ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ;

(ರೂ. ಕೋಟಿಗಳಲ್ಲಿ)

| ಕೇಂದ್ರ | ರಾಜ್ಯ | ಒಟ್ಟು |
|---|---|---|
| 1159.40 | 467.63 | 1627.03 |

ಅಮೃತ್ ಯೋಜನೆಯಡಿ ಬಿಡುಗಡೆಯಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ ರೂ.1627.03 ಕೋಟಿ ಮತ್ತು ನಗರ ಸ್ಥಳೀಯ ಸಂಸ್ಥೆಯ ವಂತಿಕೆ ರೂ.422.06 ಕೋಟಿ, ಒಟ್ಟು ರೂ.2049.09 ಕೋಟಿಗಳಲ್ಲಿ ನವೆಂಬರ್ 2018 ರ ಅಂತ್ಯದ ವರೆಗೆ ಒಟ್ಟು ರೂ.1487.02 ಕೋಟಿಗಳು ವೆಚ್ಚವಾಗಿದೆ. ವಿವಿಧ ವಲಯಗಳಲ್ಲಿ ವೆಚ್ಚ ಮಾಡಲಾದ ವಿವರಗಳು ಈ ಕೆಳಕಂಡಂತಿದೆ;

(ರೂ. ಕೋಟಿಗಳಲ್ಲಿ)

| ಕ್ರ.ಸಂ | ವಲಯ | ವೆಚ್ಚ |
|---|---|---|
| 1 | ನೀರು ಸರಬರಾಜು | 668.52 |
| 2 | ಒಳಚರಂಡಿ | 784.62 |
| 3 | ಮಳೆ ನೀರು ಚರಂಡಿ | 8.23 |
| 5 | ನಗರ ಸಾರಿಗೆ | 5.07 |
| 6 | ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ | 20.58 |
| | **ಒಟ್ಟು** | **1487.02** |

ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ವೆಚ್ಚದ ವಿವರಗಳು ಕೆಳಗಿನಂತಿವೆ;

ರೂ.ಕೋಟಿಗಳಲ್ಲಿ

| ಕ್ರ.ಸ. | ನಗರಗಳು | ಬಿಡುಗಡೆಯಾದ ಮೊತ್ತ | | | ವೆಚ್ಚ |
|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | |
| 1 | ಬೆಳಗಾವಿ | 196 | 200 | 396 | 17.18 |
| 2 | ದಾವಣಗೆರೆ | 196 | 200 | 396 | 23.88 |
| 3 | ಹುಬ್ಬಳ್ಳಿ-ಧಾರವಾಡ | 111 | 109 | 220 | 12.08 |
| 4 | ಮಂಗಳೂರು | 111 | 109 | 220 | 5.86 |
| 5 | ಶಿವಮೊಗ್ಗ | 111 | 109 | 220 | 6.75 |
| 6 | ತುಮಕೂರು | 111 | 109 | 220 | 25.59 |
| 7 | ಬೆಂಗಳೂರು | 50 | 50 | 100 | 0 |
| | ಒಟ್ಟು | 886 | 886 | 1772 | 91.34 |

ಸಂಖ್ಯೆ: ನಅಇ 275 ಸಿಎಸ್ಎಸ್ 2018

(ಯು.ಟಿ.ಖಾದರ್)

ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು.

Annexure - 1.

LCQ 1323

**Details of Allocation for the Cities under AMRUT Scheme**
**(2015-16 to 2019-2020)**

Rs. in crore

| Sl.No. | Name of District | Name of ULB | Total Allocation |
|---|---|---|---|
| 1 | Bagalkote | Badami TMC | 35.13 |
| 2 | Bagalkote | Bagalkote CMC | 114.43 |
| 3 | Bengaluru | Bengaluru CC | 939.17 |
| 4 | Belagavi | Belagavi CC | 179.59 |
| 5 | Ballari | Ballari CC | 180.69 |
| 6 | Shivamogga | Bhadravathi CMC | 153.03 |
| 7 | Bidar | Bidar CMC | 176.99 |
| 8 | Vijapura | Vijapura CC | 181.98 |
| 9 | Chickamagalur | Chickamagalur CMC | 119.32 |
| 10 | Chitradurga | Chitradurga CMC | 140.57 |
| 11 | Davanagere | Davanagere CC | 179.96 |
| 12 | Dharwad | Hubli Dharwad CC | 176.76 |
| 13 | Gadag | Gadag-Betageri CMC | 188.89 |
| 14 | Koppal | Gangavathy CMC | 110.78 |
| 15 | Kalburgi | Kalburgi CC | 172.37 |
| 16 | Hassan | Hassan CMC | 142.28 |
| 17 | Ballari | Hospete CMC | 175.64 |
| 18 | Kolar | Kolar CMC | 138.37 |
| 19 | Mandya | Mandya CMC | 138.90 |
| 20 | Dakshina Kannada | Mangaluru CC | 185.52 |
| 21 | Mysore | Mysore CC | 189.94 |
| 22 | Raichur | Raichur CMC | 176.42 |
| 23 | Haveri | Rannebennur CMC | 118.60 |
| 24 | Kolar | Robersonpet CMC | 145.26 |
| 25 | Shivamogga | Shivamogga CC | 180.82 |
| 26 | Tumkuru | Tumkuru CC | 178.93 |
| 27 | Udupi | Udupi CMC | 132.53 |
| | | **Total** | **4952.87** |

[signature]

Annexure-2

## Status of Works under AMRUT

| SN | Project | Total Allocated Amount (Cr.) | Total No. of Works | SHPSC Approval | | | Projects Completed | | | Projects Awarded | | | Under Tendering | | | Yet to be Tendered | | |
|---|---|---|---|---|---|---|---|---|---|---|---|---|---|---|---|---|---|---|
| | | | | No. | Amount | % | No. | Amount | % | No. | Amount | % | No. | Amount | % | No. | Amount | % |
| 1 | Water Supply | 2114.43 | 43 | 43 | 2114.43 | 42.70 | 0 | 0.00 | 0.00 | 38 | 2003.85 | 94.77 | 5 | 207.16 | 9.8 | 0 | 0.00 | 0.00 |
| 2 | Sewerage (UGD) | 2417.01 | 51 | 51 | 2417.01 | 48.80 | 0 | 0.00 | 0.00 | 46 | 2444.70 | 101.15 | 5 | 114.70 | 4.75 | 0 | 0.00 | 0.00 |
| 3 | Storm Water Drain | 249.782 | 84 | 84 | 249.78 | 5.04 | 7 | 4.93 | 1.97 | 18 | 28.66 | 11.47 | 59 | 219.60 | 87.92 | 0 | 0.00 | 0.00 |
| 4 | Green Space & Parks | 115.50 | 182 | 182 | 115.50 | 2.33 | 34 | 14.61 | 12.65 | 127 | 83.46 | 72.26 | 19 | 12.32 | 10.67 | 2 | 2.96 | 2.56 |
| 5 | Urban Transport | 56.15 | 45 | 45 | 56.15 | 1.13 | 5 | 3.24 | 5.77 | 23 | 22.53 | 40.11 | 17 | 25.24 | 44.94 | 0 | 0.00 | 0.00 |
| | Total = | 4952.87 | 405 | 405 | 4952.87 | 100.0 | 46 | 22.77 | 0.46 | 252 | 4583.19 | 92.54 | 105 | 579.02 | 11.69 | 2 | 2.96 | 0.06 |